## 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.

## ಎಸ್ ಸಿ ಕೇಸ್ ನಂ.78/2019

ಪ್ರಾ.ಸಾ. 10

ಚಾ.ಸಾ. 16

## ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 12.11.2024

| | |
|---|---|
| ಸಾಕ್ಷಿದಾರರ ಹೆಸರು | ಸಿ.ಎಸ್.ರಮೇಶ್ |
| ತಂದೆಯ ಹೆಸರು | ಪಟೇಲ್ ಸಿದ್ದೇಗೌಡ |
| ವಯಸ್ಸು | 55 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಚೊಟ್ಟನಹಳ್ಳಿ ಗ್ರಾಮ |

## ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ

1. ಚಾಸಾ.1 ರಿಂದ 13 ರವರು ಗೊತ್ತು. ಚಾಸಾ.17 ರಿಂದ 19 ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. 1 ನೇ ಆರೋಪಿ ಹಾಗೂ ಚಾಸಾ.1 ರವರ ಮದುವೆ 14 ವರ್ಷದ ಹಿಂದೆ ನಡೆದಿತ್ತು. ಮದುವೆಗೆ ಸಂಬಂಧಿಸಿದಂತೆ ಏನು ಮಾತುಕತೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. 20 ಗ್ರಾಂ ಚಿನ್ನ, ಉಂಗುರ ಚಾಸಾ.1 ರವರು ಆರೋಪಿತರಿಗೆ ಕೊಟ್ಟು ಮದುವೆ ಮಾಡಿದ್ದರು ಎಂದು ಪಂಚಾಯಿತಿಯಲ್ಲಿ ಗೊತ್ತಾಯಿತು. 1 ನೇ ಆರೋಪಿ ಆಗಾಗ್ಗೆ ವರದಕ್ಷಿಣೆ ಕೇಳುತ್ತಾನೆ, ಗಲಾಟೆ ಮಾಡುತ್ತಾನೆಂದು ಚಾಸಾ.1 ರವರ ಮನೆಯವರು ಲಕ್ಷ್ಮಿ ನರಸಿಂಹ ದೇವಸ್ಥಾನ ಮಾರೇಹಳ್ಳಿಯಲ್ಲಿ ಪಂಚಾಯಿತಿ ಸೇರಿಸಿದ್ದರು. ಅದಕ್ಕೆ ನಾನು ರಾಚೇಗೌಡ, ಭರತ್ ಹಾಗೂ ಇತರರು ಸೇರಿದ್ದರು. ಪಂಚಾಯಿತಿಯಲ್ಲಿ ಇಬ್ಬರೂ ಕಿತ್ತಾಡಬೇಡಿ ಅನ್ಯೋನ್ಯವಾಗಿರಿ ಎಂದು

ಬುದ್ದಿ ಹೇಳಿ ಕಳುಹಿಸಿದ್ದೆವು. ಇವರ ಸಂಸಾರದ ವಿಚಾರದಲ್ಲಿ ಸುಮಾರು 7-8 ಬಾರಿ ಪಂಚಾಯಿತಿ ಮಾಡಿದ್ದೆವು. ಪಂಚಾಯಿತಿ ಆದ ಮೇಲೆ ಪುನಃ ಗಲಾಟೆ ಮಾಡಿ ಆರೋಪಿತರು ಆಕೆಗೆ ಸೀಮೆ ಎಣ್ಣೆ ಹಾಕಿರುತ್ತಾರೆಂಬ ಬಗ್ಗೆ ಪೊಲೀಸು ದೂರು ಆಗಿರುವ ವಿಚಾರ ನನಗೆ ಗೊತ್ತಾಯಿತು. ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

1. ಚಾಸಾ.1 ರವರ ಮೈದುನ ಚಾಸಾ.3 ಹಾಗೂ ನಾನು ಸಂಬಂಧಿಕರು ಎಂದರೆ ಸರಿಯಲ್ಲ. ನನ್ನ ಗ್ರಾಮದಿಂದ ಚಾಸಾ.1 ರವರ ಗ್ರಾಮಕ್ಕೆ ಎರಡೂವರೆ ಕಿ.ಮೀ. ದೂರ ಆಗುತ್ತದೆ. ಇಬ್ಬರ ಗ್ರಾಮವೂ ಒಂದೇ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ನಾನು ಹಾಲಿನ ಡೈರಿ ಪಂಚಾಯಿತಿಗೆ ಚುನಾವಣೆಯಲ್ಲಿ ಭಾಗವಹಿಸಿದ್ದು, ನಾನು ರಾಜಕೀಯ ಮುಖಂಡ ಎಂದರೆ ಸರಿ.

2. ಆರೋಪಗಳ ಸತ್ಯಾಸತ್ಯತೆ ಬಗ್ಗೆ ನೆಲಮಾಕನಹಳ್ಳಿಗೆ ಹೋಗಿ ನಾನು ವಿಚಾರ ಮಾಡಿರುವುದಿಲ್ಲ. ನ್ಯಾಯ ಪಂಚಾಯಿತಿ ಸಮಯದಲ್ಲಿ ಒಂದು ಬಾರಿ ಬರವಣಿಗೆ ಮಾಡಿದ್ದೆವು, ಆದರೆ ಅವರು ಒಪ್ಪಿರಲಿಲ್ಲ. ನ್ಯಾಯ ಪಂಚಾಯಿತಿ ಮಾಡಿದಾಗ ಆರೋಪಿತರು ವರದಕ್ಷಿಣೆ ಕೇಳಿದ ಬಗ್ಗೆ ಮಹಿಳಾ ಆಯೋಗಕ್ಕೆ ಆಗಲೀ ಅಥವಾ ಠಾಣೆಗೆ ಆಗಲೀ ದೂರು ಕೊಡಿ ಎಂದು ನಾನು ಸಲಹೆ ನೀಡಿರಲಿಲ್ಲ. ನಾನು, ಚಾಸಾ.18 ರಿಂದ 19 ರವರುಗಳು ಸದರಿ ದೇವಸ್ಥಾನದಲ್ಲಿ ಯಾವತ್ತೂ ಪಂಚಾಯಿತಿ ಮಾಡಿಲ್ಲ ಎಂದರೆ ಸರಿಯಲ್ಲ. ಇಬ್ಬರು ಆರೋಪಿತರು ಚಾಸಾ.1 ರವರಿಗೆ ವರದಕ್ಷಿಣೆ ವಿಚಾರದಲ್ಲಿ ಗಲಾಟೆ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.1 ನಮಗೆ ಚೆನ್ನಾಗಿ ಪರಿಚಯ ಇರುವುದರಿಂದ ಆರೋಪಿತರು ನಮ್ಮ ವಿರುದ್ಧವಾಗಿ ಮತ ಚಲಾವಣೆ ಮಾಡಿದ್ದರು ಎಂಬ ಕಾರಣದಿಂದ ಅವರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ.1 ರವರು ಆರೋಪಿತರ ಮೇಲೆ ಸಿವಿಲ್ ಹಾಗೂ ಕ್ರಿಮಿನಲ್ ಕೇಸು ಹಾಕಿರುವ ವಿಚಾರ ಬಂದಿರಲಿಲ್ಲ. ಇಂದು ನ್ಯಾಯಾಲಯಕ್ಕೆ ಚಾಸಾ.1 ರವರು ನನ್ನೊಂದಿಗೆ ಬಂದಿದ್ದಾರೆಂದರೆ ಸರಿ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ಹಿಂದೆ ನಾನು ನೋಡಿಲ್ಲ ಇದೇ ಮೊದಲನೇ ಬಾರಿಗೆ ನೋಡುತ್ತಿರುವುದು ಎಂದರೆ ಸರಿಯಲ್ಲ. ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳಿಗೆ

ಅನುಕೂಲವಾಗಲೀ ಎಂಬ ಸಲುವಾಗಿ ಚಾಸಾ.1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.